
# ಪ್ರಭಾವ



ಅರವಿಂದ ಜಿ. ಜೋಷಿ
ಕಲೆ: ಸಂತೋಷ್ ಸಸಿಹಿತ್ಲು

ಬಹಳ ವರ್ಷಗಳ ಹಿಂದೆ ಮೇಧಪುರಿ ಎಂಬ ಪಟ್ಟಣದಲ್ಲಿ ಭರತ್ ಎನ್ನುವ ಕಳ್ಳನಿದ್ದ. ಆತನ ಪತ್ನಿ ಯಾವುದೋ ಕಾಡಿನ ಪ್ರಾಣಿಗೆ ಬಲಿ ಆಗಿದ್ದಳು. ಈ ಭರತ್‌ನಿಗೆ ಗಿರಿ ಎಂಬ ಮಗನಿದ್ದ. ಭರತ್ ತನ್ನ ಮಗನಿಗೆ ಓದು ಬರಹ ಕಲಿಸದೇ, ಕಳ್ಳತನ ಮಾಡುವುದನ್ನು ಹೇಳಿ ಕೊಡುತ್ತಿದ್ದ. ವರ್ಷಗಳು ಉರುಳಿದ ನಂತರ ಭರತ್‌ನಿಗೆ ವಯಸ್ಸಾಗುತ್ತ ಬಂದಿತು. ಹೀಗಾಗಿ ಆತ ಮನೆಯಲ್ಲೇ ಇರತೊಡಗಿದ್ದ. ಗಿರಿ ಒಬ್ಬನೇ ಕಳ್ಳತನ ವೃತ್ತಿ ಮುಂದುವರೆಸಿದ. ಹೀಗಿರುವಾಗ ಒಂದು ಬಾರಿ ಗಿರಿಯನ್ನು ಕರೆದು ‘ಈ ಸಣ್ಣ ಪುಟ್ಟ ಕಳ್ಳತನ ಮಾಡುವುದರ ಬದಲಿ ರಾಜನ ಅರಮನೆಯಲ್ಲಿ ಕಳ್ಳತನ ಏಕೆ ಮಾಡಬಾರದು. ಹಾಗೆ ಮಾಡಿದರೆ ಜೀವನಪರ್ಯಂತ ಆರಾಮಾಗಿ ಇರಬಹುದು’ ಎಂದು ಯೋಚನೆ ಮಾಡಿದ.

ಅದರಂತೆ ಮರುದಿನ ರಾಜನ ಅರಮನೆಯಲ್ಲಿ ಕಳ್ಳತನ ಮಾಡಲು ಹೊರಟು ನಿಂತ. ಆತ ಹೊರಡುವ ಮುನ್ನ ಆತನ ತಂದೆ ಭರತ್ ‘ನೋಡು, ನೀನು ಈ ಸಾಧು ಸಂತರ, ಮಹಾತ್ಮರ ಮಾತು ಕೇಳಬೇಡ ಅವೆಲ್ಲಾ ಬುರುಡೆ. ನಿನ್ನ ಕೆಲಸ ನೀನು ಮಾಡು’ ಎಂದು ಹೇಳಿದ್ದ. ಅದಕ್ಕೆ ಗಿರಿ ‘ಆಯ್ತು’ ಎಂದು ಅರಮನೆ ಕಡೆಗೆ ಹೊರಟಿದ್ದ. ಸ್ವಲ್ಪ ದೂರ ಹೋದ ಬಳಿಕ ಒಂದು ವೃತ್ತದ ಬಳಿ ನೂರಾರು ಜನ ಸೇರಿದ್ದನ್ನು ಗಮನಿಸಿದ. ಕುತೂಹಲ ತಾಳದೇ ಅಲ್ಲಿ ಒಬ್ಬನನ್ನು ವಿಚಾರಿಸಿದ. ಆಗ ಆ ವ್ಯಕ್ತಿ ‘ಇಲ್ಲೊಬ್ಬ ಮಹಾನ್ ಸಂತರು ಉಪನ್ಯಾಸ ಮಾಡುತ್ತಿದ್ದಾರೆ’ ಎಂದ. ಅಷ್ಟಕ್ಕೇ ಗಿರಿಗೆ ತನ್ನ ತಂದೆ ಹೇಳಿದ ಮಾತು ನೆನಪಾಗಿ ತನ್ನ ಎರಡು ಕಿವಿಗಳಲ್ಲಿ ಬೆರಳು ಸಿಗಿಸಿಕೊಂಡು ಮುಂದೆ ನಡೆದ. ಹತ್ತಾರು ಹೆಜ್ಜೆ ಹಾಗೆ ಹೋಗುವಾಗ ಆತ ಒಂದು ಕಲ್ಲಿಗೆ ಎಡವಿ ಬಿದ್ದ. ಮತ್ತೆ ಮುಂದೆ ಹೋಗುವಾಗ ಆ ಸಂತರು ಜೋರಾಗಿ ‘ಎಂದಿಗೂ ಸುಳ್ಳು ಹೇಳಬೇಡಿ... ಉಂಡ ಮನೆಗೆ ಎರಡು ಬಗೆಯಬೇಡಿ, ಸುಳ್ಳು ತಾತ್ಕಾಲಿಕ ಸುಖ ನೀಡಿದರೆ, ಸತ್ಯವು ಉಸಿರು ಇರುವವರೆಗೂ ಸುಖ ನೀಡುತ್ತದೆ’ ಎಂದು ಹೇಳುವ ಮಾತು ಪದೇ ಪದೇ ಕಿವಿ ಮೇಲೆ ಬಿದ್ದಾಗ ಅದು ಅವನ ಮನಸ್ಸಿಗೆ ನಾಟುತ್ತದೆ. ಅದೇ ಸ್ಥಿತಿಯಲ್ಲಿ ಆತ ಅರಮನೆ ಬಾಗಿಲವರೆಗೆ ಬರುತ್ತಾನೆ. ಆಗ ಅಲ್ಲಿನ ದ್ವಾರಪಾಲಕ ಆತನನ್ನು ತಡೆಹಿಡಿದು ‘ಏಯ್ ಯಾರು ನೀನು ಇಲ್ಲೇಕೆ ಬಂದೆ’ ಎಂದು ಪ್ರಶ್ನಿಸಿದಾಗ ಗಿರಿಯ ತಲೆಯಲ್ಲಿ ಆ ಸಂತರು ಹೇಳಿದ ಮಾತು ಜಾಗ್ರತೆಗೊಳ್ಳುತ್ತದೆ. ಆಗ ಆತ ‘ನಾನು ಗಿರಿ, ಅರಮನೆಯಲ್ಲಿ ಕಳ್ಳತನ ಮಾಡಲು ಬಂದಿದ್ದೇನೆ’ ಎಂದು ಸತ್ಯವನ್ನೇ ನುಡಿಯುತ್ತಾನೆ. ಆತನ ಮಾತು ಆಲಿಸಿದ ದ್ವಾರಪಾಲಕ ಎಲ್ಲೋ ಈ ಹುಡುಗ ತಮಾಷೆ ಮಾಡುತ್ತಿದ್ದಾನೆ ಎಂದು ಅರಿತು ಆತನನ್ನು ಒಳಗೆ ಬಿಡುತ್ತಾನೆ. ಗಿರಿ ಅಲ್ಲಿಂದ ಅರಮನೆ ಒಳಗೆ ಬಂದವ ತನ್ನ ಕಣ್ಣಿಗೆ ಕಾಣುವ ಬೆಲೆ ಬಾಳುವ ಸಣ್ಣ ಪುಟ್ಟ ವಸ್ತುಗಳನ್ನು ಕದ್ದು ಒಂದು ಮೂಟೆ ಕಟ್ಟಿಕೊಂಡು ಇನ್ನೇನು ಹೊರಡಬೇಕು ಎಂದಾಗ ಆತನಿಗೆ ವಿಪರಿತ ಹಸಿವು ಆಗುತ್ತದೆ. ಹೀಗಾಗಿ ಆತ ಕದ್ದ ಮಾಲಿನ ಮೂಟೆ ಸಮೇತ ಅಡುಗೆ ಮನೆಗೆ ಬರುತ್ತಾನೆ. ಆಗ ರಾತ್ರಿ ಆಗಿದ್ದರಿಂದ ಅಲ್ಲಿ ಯಾರೂ ಇರಲ್ಲ. ಆದರೆ ಅಲ್ಲಲ್ಲಿ ಪಾತ್ರೆಗಳ ತುಂಬ ರುಚಿಯಾದ ಆಹಾರ ಇರುವುದನ್ನು ನೋಡುತ್ತಾನೆ. ಆಮೇಲೆ